MS – 051

# IV Semester B.Com. Examination, May/June 2014
## (2012-13 and Onwards) (Fresh + Repeaters)
## ಕನ್ನಡ ಭಾಷಾ ಪತ್ರಿಕೆ – IV
## ಸಾಹಿತ್ಯ ಸಲ್ಲಾಪ – 2 ಮತ್ತು ವ್ಯಾವಹಾರಿಕ ಕನ್ನಡ

Time : 3 Hours                                                                 Max. Marks : 100

### ಭಾಗ - 1
### (ಸಾಹಿತ್ಯ ಸಲ್ಲಾಪ - 2)

I. ಪದ್ಯದ ಭಾವಾರ್ಥ ಬರೆಯಿರಿ : **(1×5=5)**

ಹಂದಿ ಶ್ರೀಗಂಧವ ಪೂಸಿದಡೇನು ? ಗಂಧರಾಜನಾಗಬಲ್ಲುದೆ ?
ನವಿಲು ನಲಿಯಿತ್ತೆಂದಡೆ ಕಾಕೋಳಿ ಪುಚ್ಛವ ತೆಱೆಕೊಂಡಂತೆ
ಕರ್ಮಿಗಳ ಭಕ್ತಿ !
ಹೊರ ವೇಷದ ವಿಭೂತಿ ರುದ್ರಾಕ್ಷಿಯ ಪೂಸಿದೊಡೇನು ?
ತೆಱನನಱಿದು ಮರವೆಯ ಕಳೆದು
ಮಾತಿನಂತೆ ನೀತಿಯುಳ್ಳಡೆ
ಅವರನಜಾತರೆಂಬೆ ಕಾಣಾ ರಾಮನಾಥ.

II. ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : **(3×5=15)**

1) ಅಮುಗೇಶ್ವರನನ್ನು ಮುಟ್ಟದ ಭಕ್ತಿ ಎಂಥದು ?
2) ಬುದ್ಧನ ಬಗ್ಗೆ ನದಿಯು ಹೇಳಿದ ಮಾತುಗಳೇನು ?
3) ಕೃಷ್ಣನ ರೋಗ ಗುಣವಾದ ಸಂದರ್ಭವನ್ನು ಕುರಿತು ಬರೆಯಿರಿ.
4) ಸರೋಜಳ ಕನಸಿನ ಗಂಡ ಬೆಳಗಾದ ಕೂಡಲೆ ಮಾಡಿದ ಕೆಲಸಗಳೇನು ?
5) ದೃಶ್ಯ ಮಾಧ್ಯಮಗಳನ್ನು ''ಭ್ರಮೆ ಹುಟ್ಟಿಸುವ ಸೂಪರ್ ಕಂಡಕ್ಟರ್'' ಎಂದು ಕರೆಯಲು ಕಾರಣವೇನು ?

III. ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. **(3×12=36)**

1) ಪುಸ್ತಕ, ವೃಕ್ಷ ಮತ್ತು ನದಿ ರೂಪಕಗಳು ಬುದ್ಧನನ್ನು ಕುರಿತು ಹೇಳಿದ ಮಾತುಗಳನ್ನು ವಿಮರ್ಶಿಸಿ.
2) 'ಬಿಡುಗಡೆ' ಕಥೆಯಲ್ಲಿ ಹೆಣ್ಣಿನ ತೊಳಲಾಟ ಹೇಗೆ ವ್ಯಕ್ತವಾಗಿದೆ ? ವಿವರಿಸಿ.
3) ಧಾರ್ಮಿಕ ಮತ್ತು ಆರ್ಥಿಕ ಭಯೋತ್ಪಾದಕತೆಗಳು ದೇಸೀಯ ಚಿಂತನೆಗೆ ಹೇಗೆ ಆತಂಕಕಾರಿಯಾಗಿವೆ ?
4) ಗಿಡಮೂಲಿಕೆಗಳು ನಾಶವಾಗುತ್ತಿರುವುದಕ್ಕೆ ವೈಜ್ಞಾನಿಕ ಅನ್ವೇಷಣೆಗಳು ಕಾರಣವಾಗುತ್ತಿರುವುದನ್ನು ಕುರಿತು ಬರೆಯಿರಿ.
5) ಗ್ರಹಣ ಕಾಲದಲ್ಲಿ ಟಿ.ವಿ. ನೋಡಬಾರದೆಂದು ಲೇಖಕರು ಹೇಳಲು ಕಾರಣವೇನು ? ವಿವರಿಸಿ.

## ಭಾಗ - 2
## (ವ್ಯಾವಹಾರಿಕ ಕನ್ನಡ)

IV. ನಾಲ್ಕಕ್ಕೆ ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ : (4×5=20)

1) ಆಹ್ವಾನ ಪತ್ರಿಕೆಯ ಸ್ವರೂಪ

2) ಕಾರ್ಯಕ್ರಮ ಪಟ್ಟಿ

3) ವರ್ಗೀಕೃತ ಜಾಹೀರಾತು

4) ಸಂದರ್ಶನ ಆಧರಿಸಿದ ವರದಿಗಾರಿಕೆ

5) ಟೆಂಡರು ಪ್ರಕಟಣೆ

6) ಇ-ವ್ಯವಹಾರ.

V. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : (2×12=24)

1) ಸಮಿತಿ ವರದಿ ಎಂದರೇನು ? ಸಿದ್ಧ ಉಡುಪು ಸಂಸ್ಥೆಯೊಂದರ ವ್ಯವಹಾರ ಕುಸಿದಿರುವುದಕ್ಕೆ ಸಂಬಂಧಿಸಿದಂತೆ ಸಮಿತಿ ವರದಿಯ ಮಾದರಿಯನ್ನು ಸಿದ್ಧಪಡಿಸಿ.

2) ನಗರಗಳಲ್ಲಿ ತಲೆ ಎತ್ತುತ್ತಿರುವ ಅಕ್ರಮ ಕಟ್ಟಡಗಳನ್ನು ಕುರಿತು ಪತ್ರಿಕಾ ವರದಿಯನ್ನು ರಚಿಸಿ.

3) ಸಭೆಯ ತಿಳುವಳಿಕೆ ಪತ್ರ ಎಂದರೇನು ? ಕಾಲೇಜಿನ ಕನ್ನಡ ಸಂಘದ ಸಭೆಗೆ ಸಂಬಂಧಿಸಿದಂತೆ ಮಾದರಿಯನ್ನು ರಚಿಸಿ.

4) ಜಾಹೀರಾತಿನ ಉಪಯೋಗಗಳೇನು ? ಜಾಹೀರಾತಿನ ವಿಧಗಳನ್ನು ಕುರಿತು ಬರೆಯಿರಿ.

---